# ಭಾರತ ಸಂವಿಧಾನ ಮತ್ತು ಬಸವಾದಿ ಶರಣರ ಚಿಂತನೆಗಳು

ಭೀ. ಜಿ. ನಂದನ

ಉಪನ್ಯಾಸಕರು, ಕೆ.ಎನ್.ವಿ.ವಿ.ಎಸ್. ಮಹಾವಿದ್ಯಾಲಯ, ಕಿತ್ತೂರು.

Received: 11-02-2024 ; Accepted: 16-03-2024 ; Published: 07-05-2024

DOI: https://doi.org/10.5281/zenodo.11127212

## ABSTRACT:

ಭಾರತದ ಸಂವಿಧಾನ ಮತ್ತು ಬಸವಾದಿಶರಣರ ಚಿಂತನೆಗಳು ಎಂಬ ಎರಡು ಮಹಾನ್ ಐತಿಹಾಸಿಕ ದಾಖಲೆಗಳು. ಭಾರತದ ಸಂವಿಧಾನವನ್ನು ಮತ್ತು ಶರಣರ ವಚನ ಸಾಹಿತ್ಯವನ್ನು ಆಳವಾಗಿ ಆಧ್ಯಯನಗೈದವರಿಗೆ ವಚನ ಸಾಹಿತ್ಯದ ಪ್ರತಿಧ್ವನಿಯೇ ಭಾರತ ಸಂವಿಧಾನವೆಂಬ ಒಂದು ಸತ್ಯವು ಗೋಚರಿಸುತ್ತದೆ. ವಚನ ಸಾಹಿತ್ಯದ ವ್ಯಾಪ್ತಿಯು ಆಕಾಶದಷ್ಟು ವಿಶಾಲವಾದದ್ದು ಮತ್ತು ಸಾಗರದಷ್ಟು ಆಳವಾದದ್ದು ಹಾಗು ಅದು ವಿಶ್ವಮಾನವ ಕುಲಕೋಟಿಗೆ ಕಾಲಾತೀತವಾಗಿ ಸಂಬಂಧಿಸಿದ್ದಾಗಿದೆ. ಆದರೆ ಭಾರತದ ಸಂವಿಧಾನವು ವಿಶ್ವದ ಎಲ್ಲ ಸಂವಿಧಾನಗಳ ಒಳ್ಳೆ ಅಂಶಗಳನ್ನು ಒಳಗೊಂಡಿದ್ದರೂ ಅದರ ವ್ಯಾಪ್ತಿಯು ಮಾತ್ರ ಭಾರತಕ್ಕಷ್ಟೇ ಸಿಮಿತವಾಗಿದೆ. ಭಾರತದ ಸಂವಿಧಾನವು ಸಂಸತ್ತಿಕ ಪ್ರಜಾಪ್ತಭುತ್ವ ಮತ್ತು ಸಮಾಜಿಕ ಕಲ್ಯಾಣ ರಾಜ್ಯದ ಹಾಗು ಸಾಮಾಜಿಕ ನ್ಯಾಯದ ಕುರಿತಷ್ಟೇ ಚಿಂತಿಸಿದರೆ ವಚನ ಸಾಹಿತ್ಯವು ಆಧ್ಯಾತ್ಮಿಕ ಪ್ರಜಾಪ್ರಭುತ್ವ ಮತ್ತು ಆಧ್ಯಾತ್ಮಿಕ ಕಲ್ಯಾಣ ರಾಜ್ಯದ ಕುರಿತು ಚಿಂತಿಸಿದೆ. ಒಂದುಲಕ್ಷದ ತೋಂಬತ್ತಾರು ಸಾವಿರ ಜಂಗಮರು, ಎಲ್ಲ ಜಾತಿಯ ಸ್ತ್ರೀಪುರುಷರನ್ನೊಳಗೊಂಡ ಏಳುನೂರದ ಎಪ್ಪತ್ತು ಗಣಾಧಿಶರು ಮತ್ತು ಮೂನ್ನೂರದ ಆರವತ್ನಾಲ್ಕು ವಚನಕಾರರು, ಹನ್ನೇರಡು ಸಾವಿರ ಇಷ್ಟಲಿಂಗ ಧಾರಣೆಗೊಂಡ ದೇವದಾಸಿಯರು, ಅಲ್ಲಮಹಾಪ್ರಭುಗಳ ಅಧ್ಯಕ್ಷತೆಯಲ್ಲಿ ಚೆನ್ನಬಸವಣ್ಣನವರ ಕಾರ್ಯಾಧ್ಯಕ್ಷತೆಯಲ್ಲಿ ಅನುಭವಮಂಟಪವೆಂಬ ಧರ್ಮಸಂಸತ್ತನ್ನು ಅನುಷ್ಠಾನಗೊಳಿಸಲಾಗಿತ್ತು. ಹೆಣ್ಣು ಗಂಡು, ಮೇಲು ಕೀಳು ಎಂಬ ಯಾವ ಭೇದ ಭಾವವಿಲ್ಲದೆ ಚರ್ಚೆಗಳು ನಡೆದು ಸರ್ವರ ಸಮ್ಮತಿ ಪಡೆದು ವಚನ ರೂಪದಲ್ಲಿ ಅನುಮೋದಿಸಲಾಗುತ್ತಿತ್ತು. ಕಲ್ಯಾಣ ಕ್ರಾಂತಿಯಲ್ಲಿ ಅಳಿದುಳಿದ ವಚನಗಳು ಸುಮಾರು 24 ಸಾವಿರದಷ್ಟು ಸದ್ಯದಲ್ಲಿ ಸಂಶೋಧನೆಗೊಂಡಿವೆ. ಅಂದಿನ ವಿಶ್ವಕ್ಕೆ ಪ್ರಜಾಪ್ರಭುತ್ವದ ಹೆಸರನ್ನು ಕೇಳರಿಯದ 12ನೆಯ ಶತಮಾನದ ಬಸವಾದಿಶರಣರ ಆಧುನಿಕ ಪ್ರಜಾಪ್ರಭುತ್ವವನ್ನು ನಾಚಿ ತೆಲೆತೆಗ್ಗಿಸುವಂತ್ತಿತು. ಭಾರತದ ಸಂವಿಧಾನವು 296 ಜನಪ್ರತಿನಿಧಿಗಳನ್ನೊಳಗೊಂಡ ಸಂವಿಧಾನಾತ್ಮಕ ಸಮಿತಿಯ ಸದಸ್ಯರುಗಳು 22 ಮುಖ್ಯ ಸಂವಿಧಾನಾತ್ಮಕ ಸಮಿತಿಯಲ್ಲಿ ಹಾಗೂ 5 ಉಪ ಸಮಿತಿಯಲ್ಲಿ ಹಂಚಿಹೋಗಿದ್ದರು. ಅದು 2 ವರ್ಷ 11 ತಿಂಗಳು 18 ದಿನಗಳಷ್ಟು ಸಮಯವನ್ನು ತೆಗೆದುಕೊಂಡು 395 ಸಂವಿಧಾನಾತ್ಮಕ ವಿಧಿಗಳನ್ನು, 8 ಶೆಡ್ಯೂಲ್ಲುಗಳನ್ನು. 22 ಭಾಗಗಳನ್ನು ಒಳಗೊಂಡಿತ್ತು. ಪ್ರಸ್ತುತದಲ್ಲಿ 460ಕ್ಕಿಂತಲು ಹೆಚ್ಚು ಸಂವಿಧಾನಾತ್ಮಕ

ವಿಧಿಗಳನ್ನು, 25 ಭಾಗಗಳನ್ನು, 12 ಶೆಡ್ಯೂಲ್ಲುಗಳನ್ನು ಒಳಗೊಂಡಿದೆ. ಇವೆರಡು ವಿಷಯಗಳ ಹೋಲಿಕೆಯ ಅಧ್ಯಯನವು ತುಂಬಾ ಪ್ರಸ್ತುತವಾಗಿದೆ ಮತ್ತು ಕುತೂಹಲಕಾರಿಯಾಗಿದೆ.

**KEYWORDS:**

ಸಂವಿಧಾನ, ಕಲ್ಯಾಣ, ಗಣಾಧೀಶರು, ಸಾಮಾಜಿಕ ನ್ಯಾಯ, ದಾರ್ಶನಿಕರು, ಸಾಮ್ಯಾ–ಸಾಮ್ಯತೆ, ಹುರುಳು.

## ಪ್ರಸ್ತಾವನೆ:

ಭಾರತ ದೇಶವು ಇಡೀ ವಿಶ್ವದಲ್ಲಿಯೇ ವಿಶಿಷ್ಟವಾದ ದೇಶ. ಈ ದೇಶದ ಚರಿತ್ರೆಯಲ್ಲಿ ಕೆಲವೊಂದು ವಿಶಿಷ್ಟವಾದ ಘಟನೆಗಳು ಜರುಗಿವೆ. ಆ ಘಟನೆಗಳೇ ಬುದ್ಧ ಬಸವಾದಿಗಳ ಉಗಮ ಮತ್ತು ಭಾರತ ಸಂವಿಧಾನದ ಅನುಷ್ಠಾನ. ಈ ಸಂಶೋಧನಾ ಲೇಖನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ವಿಷಯವೇ ಪ್ರಸ್ತುತ ಭಾರತ ಸಂವಿಧಾನ ಮತ್ತು 12ನೇ ಶತಮಾನದ ಬಸವಾದಿ ಶರಣರ ಚಿಂತನೆಗಳ ತುಲನಾತ್ಮಕ ಅಧ್ಯಯನಗೈಯುವಹಾಗಿದೆ. ಅಂದರೆ–ಈ ಎರಡು ಘಟನೆಗಳ ಚಾರಿತ್ರಿಕ ಹಿನ್ನೆಲೆ, ಅನುಷ್ಠಾನದ ಪ್ರಕ್ರಿಯೆ, ಅವುಗಳ ಮೂಲ ಕಾರಣಗಳು ಹಾಗೂ ಅವುಗಳ ಫಲಶ್ರುತಿಗಳು. ಇವೆಲ್ಲವುಗಳನ್ನು ಬಹುಸಂಕ್ಷಿಪ್ತವಾಗಿ ಹಾಗೂ ತುಲನಾತ್ಮಕವಾಗಿ ವಿಶ್ಲೇಷಿಸುವುದು ಈ ಲೇಖನದ ಮೂಲ ಉದ್ದೇಶವಾಗಿದೆ. ಇಡೀ ಸಂವಿಧಾನದ ಸಂಕ್ಷಿಪ್ತವಾದ ಹುರುಳನ್ನು ಪ್ರತಿನಿಧಿಸುವ ಸಂವಿಧಾನದ ಅವಿಭಾಜ್ಯದ ಅಂಗವೆಂದೇ ಪರಿಗಣಿಸಲ್ಪಟ್ಟ ಸಂವಿಧಾನದ ಪೂರ್ವಪೀಠಿಕೆಯ (Preamble) ಜೊತೆ ಸಾಮ್ಯತೆಗಳ ಕುರಿತು ವಿಶ್ಲೇಷಿಸುವ ಒಂದು ಪ್ರಯತ್ನವಿದಾಗಿದೆ.

ಬಸವಾದಿ ಶರಣರು 12ನೇ ಶತಮಾನ ಕಂಡ ಮಹಾನ್ ದಾರ್ಶನಿಕರು. ಕರ್ನಾಟಕದ ಬೀದರ್ ಜಿಲ್ಲೆಯ ಕಲ್ಯಾಣದಲ್ಲಿ ನಡೆದಂತಹ ಒಂದು ಮಹಾನ್ ಚಳುವಳಿಯು. ಈ ಚಳುವಳಿಗೆ ಮೂಲಸ್ಫೂರ್ತಿಯ ಸೆಲೆಯಾಗಿ ನಿಂತವರು ವಿಶ್ವಗುರು ಜಗಜ್ಯೋತಿ ಬಸವೇಶ್ವರರು. ಇವರ ವ್ಯಕ್ತಿತ್ವಕ್ಕೆ ಮತ್ತು ಆಳವಾದ ಚಿಂತನೆಗೆ ಒಲಿದು ಬಂದವರು ಕೇವಲ ಭಾರತೀಯರಷ್ಟೆ ಅಲ್ಲದೆ ವಿಶ್ವದ ಮೂಲೆಮೂಲೆಗಳಿಂದ ಬಂದಿದ್ದರು. ಅಫ್ಘಾನಿಸ್ತಾನದಿಂದ ಮರಳು ಶಂಕರ ದೇವರು, ಕಾಶ್ಮೀರದಿಂದ ಮೋಳಿಗೆಯ ಮಾರಯ್ಯನವರು. ಈ ವಚನ ಕ್ರಾಂತಿಯು ಮಾನವ ನಿರ್ಮಾಣ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದು ಇಡೀ ವಿಶ್ವದಲ್ಲಿಯೇ ಇದು ಒಂದು ಅನುಪಮವಾದದ್ದು ಮತ್ತು ಅನನ್ಯವಾದದ್ದು. ಈ ಚಳುವಳಿಯ ಮೂಲ ಉಗಮಕ್ಕೆ

ಕಾರಣವೆಂದರೆ ಅಂದಿನ ಭಾರತೀಯ ಸಮಾಜದಲ್ಲಿ ಧರ್ಮದೇವರುಗಳ ಹೆಸರಿನಲ್ಲಿ ನಡೆದಂತ ಜನಸಾಮಾನ್ಯರ ಶೋಷಣೆ, ಜನಾಂಗೀಯದ್ವೇಷ, ವರ್ಣ ಜಾತಿಗಳ ಅಟ್ಟಹಾಸ, ಅಸ್ಪೃಶ್ಯತಾ ಆಚರಣೆ, ಮಹಿಳಾ ಶೋಷಣೆ ಮುಂತಾದವುಗಳ ಕಾರಣಗಳಿಂದಲೇ ಭಾರತೀಯರ ಒಗ್ಗಟ್ಟು ಒಡೆದು ಹೋಗಿ ಸರಿಸುಮಾರು ಸಾವಿರಾರು ವರ್ಷಗಳಷ್ಟು ಪರಕೀಯರ ಆಳ್ವಿಕೆಗೆ ಭಾರತವು ಒಳಪಟ್ಟಿದ್ದು. ಇಂತ ವೈವಿಧ್ಯಮಯವಾದ ದೇಶಕ್ಕೆ ಸ್ವಾತಂತ್ರ್ಯೋತ್ತರದಲ್ಲಿ ಇಡೀ ದೇಶವನ್ನು ಒಂದು ಸಂಹಿತೆಗೆ ಒಳಪಡಿಸುವುದು ಮತ್ತು ಏಕತೆಯನ್ನು ಮೂಡಿಸುವುದು ಒಂದು ಪವಾಡವೇ ಆಗಿತ್ತು. ಇದನ್ನು ಸಂವಿಧಾನದ ನಿರ್ಮಾತೃಗಳು ಸಂವಿಧಾನವನ್ನು ಅನುಷ್ಠಾನಗೊಳಿಸುವ ಮೂಲಕ ಈ ಪವಾಡ ಸದೃಶ್ಯವಾದ ಕೆಲಸವನ್ನು ಮಾಡಿಮುಗಿಸಿದ್ದರು. ಇಡೀ ಸಂವಿಧಾನದಲ್ಲಿ ನಮೂದಿಸಿದ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕನ್ಯಾಯ, ಜ್ಯಾತ್ಯಾತೀತತೆಯ ನಿಲುವುಗಳು, ಸಹೋದರತ್ವಗಳು ಆದಾಗಲೇ ವಚನಸಾಹಿತ್ಯದಲ್ಲಿ ನಮೂದಾಗಿ ಹೋಗಿದ್ದವು. ಆಧುನಿಕ ಸಂಸತ್ತಿನಗಿಂತಲೂ ಬಹಳಪಟ್ಟು ಮುಂದೆಹೋಗಿ ಅನುಭವ ಮಂಟಪವನ್ನು ಕಟ್ಟುವ ಮೂಲಕ ಪ್ರಸ್ತುತದಲ್ಲಿರುವ ಪ್ರಜಾಪ್ರಭುತ್ವಕ್ಕೆ ಮಾದರಿಯಾಗುವಂತೆ ಪ್ರಜಾಪ್ರಭುತ್ವ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆದು ತೋರಿಸಿದ್ದರು. ಸಮಾನತೆಯೇ ಪ್ರಜಾಪ್ರಭುತ್ವದ ಮೂಲ ಅಡಿಪಾಯವೆಂದು ಹೇಳಿ ಅಂದೇ ಅಸ್ಪೃಶ್ಯ ಶರಣ ಹರಳಯ್ಯನ ಮಗ ಶೀಲವಂತನಿಗೆ ಮತ್ತು ಬ್ರಾಹ್ಮಣ ಮಧುವರಸನ ಮಗಳಾದ ಲಾವಣ್ಯವತಿಗೆ ಕೊಟ್ಟು ಪ್ರತಿಲೋಮದಂತ ಮದುವೆ ಮಾಡಿದ್ದರೆಂದರೆ ಬಸವಾದಿ ಶರಣರ ದೂರದೃಷ್ಠಿ ಎಷ್ಟೋಂದಿತ್ತು ಎಂಬುದುನ್ನು ಗ್ರಹಿಸಬೇಕಾಗಿದೆ. ಅಲ್ಲದೆ 12 ಸಾವಿರಕ್ಕಿಂತಲೂ ಹೆಚ್ಚು ಕಲ್ಯಾಣದ ದೇವದಾಸಿಯರಿಗೆ ಲಿಂಗಾಯತ ಧರ್ಮಭೋಧನೆ ಮಾಡಿ ಇಷ್ಟಲಿಂಗ ಧಾರಣೆ ಮಾಡಿದ್ದರೆಂದರೆ ಇವರ ಧರ್ಮಸುಧಾರಣೆಯ ಪರಿಯನ್ನು ತಿಳಿಯಬಹುದಾಗಿದೆ. ನಮ್ಮ ಸಂವಿಧಾನದ ರಚನೆಗಾಗಿ ಜನಪ್ರತಿನಿಧಿಗಳಿಂದ ಆಯ್ಕೆಯಾಗಿ ಬಂದ ಜನಪ್ರತಿನಿಧಿಗಳು ಒಟ್ಟು 296 ಸದಸ್ಯರುಗಳು. ಈ ಎಲ್ಲ ಸದಸ್ಯರುಗಳನ್ನು ಒಟ್ಟು 22 ಮುಖ್ಯ ಮತ್ತು 5 ಉಪ ಸಂವಿಧಾನಾತ್ಮಕ ಸಮಿತಿಯಲ್ಲಿ ವಿಂಗಡಿಸಲಾಗಿತ್ತು. ಸಂವಿಧಾನಾತ್ಮಕ ರಚನೆಗಾಗಿ ನಡೆದ ಒಟ್ಟು ಅಧಿವೇಶನಗಳು 11 ಆಗಿದ್ದು 2 ವರ್ಷ, 11 ತಿಂಗಳು, 18 ದಿನಗಳಷ್ಟು ಸಮಯವನ್ನು ತೆಗೆದುಕೊಂಡು ಒಟ್ಟು 284 ಸದಸ್ಯರುಗಳು ಹೊಸ ಸಂವಿಧಾನದ ಕರಡಿಗೆ ಸಹಿ ಹಾಕಿದ್ದರು. ಒಟ್ಟು 395 ವಿಧಿಗಳನ್ನು 22 ಭಾಗಗಳನ್ನು 8 ಶೆಡ್ಯುಲ್‌ಗಳನ್ನು ಹೊಂದಿತ್ತು. ಪ್ರಸ್ತುತದಲ್ಲಿ ಭಾರತದ ಸಂವಿಧಾನವು 25 ಭಾಗಗಳನ್ನು 12 ಶೆಡ್ಯೂಲ್‌ಗಳನ್ನು 465ಕ್ಕಿಂತಲೂ ಹೆಚ್ಚು ವಿಧಿಗಳನ್ನು ಮತ್ತು 124ಕ್ಕಿಂತಲು ಹೆಚ್ಚು ಸಂವಿಧಾನಾತ್ಮಕ ತಿದ್ದುಪಡಿಗಳನ್ನು

ಒಳಗೊಂಡಿದೆ. ಸಂವಿಧಾನದ ಪೂರ್ವ ಪೀಠಿಕೆಯು ಸಮಗ್ರ ಸಂವಿಧಾನದ ಮೂಲ ಗುರಿ ಮತ್ತು ಉದ್ದೇಶಗಳನ್ನು ಪ್ರತಿನಿಧಿಸುತ್ತದೆಯಾದ್ದರಿಂದ ಸಂವಿಧಾನದ ಪೂರ್ವ ಪೀಠಿಕೆಯನ್ನಷ್ಟೆ ಇಲ್ಲಿ ಆಧಾರವಾಗಿ ಇಟ್ಟುಕೊಳ್ಳಲಾಗಿದೆ.

**ಸಂವಿಧಾನದ ಪೂರ್ವಪೀಠಿಕೆ:**

**"ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ವ್ಯವಸ್ಥೆಗೊಳಿಸಲು ಮತ್ತು ಅದರ ಎಲ್ಲ ಪೌರರಿಗೆ; ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನ ಸ್ವಾತಂತ್ರ್ಯ; ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆ ಎಲ್ಲರಿಗೂ ದೊರೆಯುವಂತೆ ಮಾಡುವುದಕ್ಕೆ; ವ್ಯಕ್ತಿ, ಗೌರವ ಮತ್ತು ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ರಕ್ಷಿಸಿ, ಭ್ರಾತೃ ಭಾವನೆಯನ್ನು ಎಲ್ಲರಿಗೂ ವೃದ್ಧಿಗೊಳಿಸುವುದಕ್ಕಾಗಿ ದೃಢ ಸಂಕಲ್ಪ ಮಾಡಿ, ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ನವೆಂಬರ್ 26, 1949 ರಂದು ಈ ಸಂವಿಧಾನವನ್ನು ಅಂಗೀಕರಿಸಿ ಕಾನೂನು ರೂಪದಲ್ಲಿ ನಮಗೆ ನಾವೇ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ."**[1]

ಭಾರತೀಯರಾದ ನಾವುಗಳು ಧರ್ಮ, ಜಾತಿ, ಅಸ್ಪೃಶ್ಯತೆ, ಲಿಂಗ, ತಾರತಮ್ಯತೆಯಿಂದ ಭಾರತೀಯತನದ ಪ್ರಜ್ಞೆಯನ್ನೇ ಕಳೆದುಕೊಂಡ ಜನತೆಯಿಂದ ದೇಶಕ್ಕಾದರೂ ತನ್ನತನದ ಪ್ರಜ್ಞೆ ಎಲ್ಲಿಂದ ಬರಬೇಕು ಎನ್ನುವಂತ ಚಿಂತನೆಯು ಸಂವಿಧಾನದ ನಿರ್ಮಾತೃಗಳಿಗೆ ಅಂದೇ ಕಾಡಿರಬೇಕು. ಆದರೆ ಈ ಭಾವನೆಯು 850 ವರ್ಷಗಳ ಹಿಂದೆಯೇ ಬಸವಾದಿಶರಣರಿಗೆ ಈ ಭಾವನೆಯು ಮೂಡಿತ್ತೆಂದರೆ ವಿಚಿತ್ರವಾದರೂ ಸತ್ಯವೆಂಬುದನ್ನು ಅಲ್ಲಗಳೆಯಲಾಗದು. ಸಂವಿಧಾನ ಪೂರ್ವ ಪೀಠಿಕೆಯಲ್ಲಿ ಕಂಡುಬರುವ ಮುಖ್ಯಾಂಶಗಳ ಜೊತೆಗೆ, ಹೋಲಿಕೆಗಳ ವಿಶ್ಲೇಷಣೆಗೈಯ್ಯುವ ಮೊದಲು ಭಾರತ ಸಂಸತ್ತು ಮತ್ತು ಶರಣರ ಅನುಭವಮಂಟಪದ(ಮಹಾ–ಮನೆಯ) ಕುರಿತು ತಿಳಿಯುವುದು ಅವಶ್ಯವಾಗಿದೆ.

**ಭಾರತದ ಸಂಸತ್ತು ಮತ್ತು ಅನುಭವ ಮಂಟಪ:**

ಪ್ರಜಾಪ್ರಭುತ್ವ ಮತ್ತು ಪ್ರಜಾಸಂಸತ್ತುಗಳ ಹೆಸರನ್ನೇ ಕೇಳರಿಯದ ಅಂದಿನ ವಿಶ್ವಕ್ಕೆ ಅನುಭವ ಮಂಟಪವೆಂಬ ಧರ್ಮೋ–ರಾಜಕೀಯ ಸಂಸತ್ತು ಕೊಟ್ಟದ್ದು ಮಾತ್ರ ಬಸವಾದಿಶರಣರು. ಹೆಣ್ಣುಗಂಡು ಜಾತಿ ಸಮುದಾಯಗಳ ಭೇದಭಾವವಿಲ್ಲದೆ ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಅನುಭವ ಮಂಟಪದ ಚರ್ಚೆಯಲ್ಲಿ ಭಾಗವಹಿಸುವ ಪರಿಯು ಆಧುನಿಕ ಪ್ರಜಾಪ್ರಭುತ್ವವು ನಾಚುವಂತಿತ್ತು. ಪ್ರಸ್ತುತ ಪ್ರಜಾಪ್ರತಿನಿಧಿಗಳು

296 ಇದ್ದರೆ ಶರಣರ ಅನುಭವ ಮಂಟಪದಲ್ಲಿ 1,96,000 ಧರ್ಮ ಪ್ರಚಾರಕ ಜಂಗಮರು, 770 ವಿವಿಧ ಜಾತಿ ಧರ್ಮ ಸಮುದಾಯಗಳ ಸ್ತ್ರೀಪುರುಷರಿಂದ, ಕೂಡಿದ ಗಣಾಧೀಶರು ಹಾಗೂ 364 ವಚನಕಾರರಿದ್ದರು. ಭಾರತ ಸಂವಿಧಾನವು 395 ಕಲುಮುಗಳಿಂದ ರಚಿತವಾಗಿದ್ದರೆ, ಬಸವಾದಿ ಶರಣರ ಧರ್ಮಸಂವಿಧಾನವು 24,000 ಸಾವೀರದಷ್ಟು ವಚನಗಳೆಂಬ ಧರ್ಮವಿಧಿಗಳಿಂದ ಕೂಡಿತ್ತು, ಸಂವಿಧಾನಾತ್ಮಕವಾಗಿ ಸಾಂಸತ್ತಿಕ ಪ್ರಜಾಪ್ರಭುತ್ವವೆನ್ನುವುದಾದರೆ(Parliamentary Democracy) ಶರಣರ ವಚನಸಾಹಿತ್ಯಕ್ಕೆ ಅಧ್ಯಾತ್ಮಿಕ ಪ್ರಜಾಪ್ರಭುತ್ವವೆಂದು(Spiritual Democracy) ಕರೆಯಬಹುದಾಗಿದೆ. ಹಾಗೆ ಸಂವಿಧಾನಾತ್ಮಕವಾಗಿ ಸಾಧಿಸಬೇಕಾದದ್ದು ಸಾಮಾಜಿಕ ಕಲ್ಯಾಣ ರಾಜ್ಯವೆನ್ನುವುದಾದರೆ(Social Welfare State) ವಚನಸಾಹಿತ್ಯವು ಇನ್ನೂ ಮುಂದೆಹೋಗಿ ಸಾಧಿಸಬೇಕಾದದ್ದು ಆಧ್ಯಾತ್ಮಿಕ ಕಲ್ಯಾಣ ರಾಜ್ಯವೆಂತಲೂ(Spiritual Welfare State) ಕರೆಯಬಹುದಾಗಿದೆ. ಸಂವಿಧಾನವು ಬಾಹ್ಯ ಒತ್ತಡದಿಂದ ಸುಧಾರಣೆ ತರುವ ಪ್ರಯತ್ನವಾದರೆ(Extroversion purification), ವಚನ ಸಾಹಿತ್ಯವು ಆಂತರಿಕ ಶುದ್ಧೀಕರಣದಿಂದ ಮೊದಲ್ಗೊಂಡು ಬಾಹ್ಯ ಸುಧಾರಣೆಯತ್ತ ಸಾಗಿ(Introversion cum Extroversion purification) ಸುಧಾರಣೆಗೈಯುವದಾಗಿದೆ.

ಹಾಗಾಗಿ ಹೇಳುವುದೇನೆಂದರೆ, ಸಂವಿಧಾನದಲ್ಲಿರುವುದೆಲ್ಲವೂ ಮತ್ತು ಸಂವಿಧಾನದಲ್ಲಿಲ್ಲದ್ದು ಹಾಗೂ ಇರಬೇಕಾದುದ್ದೆಲ್ಲವೂ ವಚನ ಸಾಹಿತ್ಯದಲ್ಲಿದೆ ಎಂದು. ಅಂದರೆ ವಚನ ಸಾಹಿತ್ಯದಲ್ಲಿ ಇದ್ದದ್ದೆಲ್ಲವೂ ಸಂವಿಧಾನದಲ್ಲಿಲ್ಲವೆಂದ ರ್ಥ. ಯಾಕೆಂದರೆ ಸಂವಿಧಾನವು ಕಾನೂನಾತ್ಮಕವಾಗಿ ರಾಜಕೀಯ ಚೌಕಟ್ಟಿಗೆ ಮಾತ್ರ ಸೀಮಿತವಾದರೆ ಶರಣರವಚನಸಾಹಿತ್ಯವು ಮಾನವಜೀವನದ ಎಲ್ಲ ವಲಯಗಳನ್ನು ಒಳಗೊಂಡಂತ ಎಲ್ಲ ಚೌಕಟ್ಟುಗಳ ವ್ಯಾಪ್ತಿಯುಳ್ಳದ್ದಾಗಿದೆ. ಭಾರತದ ಸಂವಿಧಾನವು ಭಾರತಕ್ಕಷ್ಟೇ ಸೀಮಿತವಾಗಿದ್ದು ಕಾಲಕ್ಕೆ ತಕ್ಕಂತೆ ಅದನ್ನು ತಿದ್ದುಪಡಿಗೆ ಒಳಪಡಿಸಲಾಗುತ್ತದೆ. ಆದರೆ ವಚನ ಸಾಹಿತ್ಯವು ಇಡೀ ವಿಶ್ವಮಾನವ ಕುಲಕೋಟಿಯನ್ನು ಒಳಗೊಳ್ಳುವ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ. ವಚನ ಸಾಹಿತ್ಯಕ್ಕೆ ಕಾಲಮಿತಿಯಂಬುವದಿಲ್ಲ ಹಾಗಾಗಿ ಇದು ವಿಶ್ವಮಾನವ ಕುಲಕೋಟಿಯ ಪ್ರಜೆಗಳ ಸಂಹಿತಾ ಸಂವಿಧಾನವಾಗಿದೆ(Cosmos Code Of Constitution) ಎಂದು ಹೇಳುವದು. ಸಂವಿಧಾನವು ಪ್ರಜೆಗಳನ್ನು ಒಬ್ಬ ನಾಗ ರಿಕ ಮಾನವಜೀವಿಯನಾಗಿ ಪರಿಗಣಿಸಿದರೆ, ವಚನಸಾಹಿತ್ಯವು ಮಾನವನನ್ನು ದೇವಮಾನವನನ್ನಾಗಿ ಪರಿಗಣಿಸಿ ಅವನ ಅಂತರಂಗದಲ್ಲಿ ಅಂತರ್ಗತವಾದ ದೈವತ್ವದ ಸಾಮರ್ಥ್ಯತೆಯನ್ನು ವೃದ್ಧಿಗೊಳಿಸಲು ಅಣಿಗೊಳಿಸುತ್ತದೆ. ಹಕ್ಕು

ಕರ್ತವ್ಯಗಳ ಕುರಿತು ಸಂವಿಧಾನವು ಹೇಳಿದರೆ ಕಾಯಕ ದಾಸೋಹದಂತ ಕರ್ತವ್ಯಗಳನ್ನು ಹಾಗೂ ಶಿವಯೋಗದಂತ ತತ್ವಗಳ ಕುರಿತು ವಚನಸಾಹಿತ್ಯವು ಪ್ರಸ್ತಾಪಿಸುತ್ತದೆ. ಕಾಯಕನಿಷ್ಠೆಯು ಗುರುಲಿಂಗಜಂಗಮ ನಿಷ್ಠೆಗಿಂತಲೂ ಮಿಗಿಲಾದದ್ದು ಅಷ್ಠೆಅಲ್ಲದೆ ಸ್ವತಃ ದೇವರು ಸಹ ಇದಕ್ಕೆ ಹೊರತಲ್ಲವೆಂಬುದು ಬಸವಾದಿ ಶರಣರ ಚಿಂತನೆಯಾಗಿತ್ತು. ಇದೇ ಅನುಭವಮಂಟಪದ ಮೂಲ ತಾತ್ವಿಕ ಚಿಂತನೆಯಾಗಿತ್ತು. ಮಾನವ ನಿರ್ಮಾಣ ಸಿದ್ಧಾಂತವೇ ವಚನಸಾಹಿತ್ಯದ ಹೃದಯಸ್ಥ ಚಿಂತನೆಯಾಗಿತ್ತು.

**ಸ್ವಾತಂತ್ರ್ಯ ಮತ್ತು ಸಮಾನತೆ:**

ಭಾರತ ಸಂವಿಧಾನದ ನಿರ್ಮಾಪಕರು ಭಾರತವು ಒಂದು ಸಾರ್ವಭೌಮತ್ವವುಳ್ಳ ರಾಷ್ಟ್ರವೆಂದು ಹೇಳಿದ್ದರು ಅಷ್ಟೆ. ಆದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರತಿಯೊಬ್ಬ ಬಸವ ಧರ್ಮದ ಪ್ರಜೆಯೂ ನುಡಿದಂತೆ ನಡೆದು ತಮ್ಮ ಕಾಯಕದಾಸೋಹಗಳಂತ ತತ್ವಗಳನ್ನು ಮೈಗೂಡಿಸಿಕೊಂಡಿದ್ದೇ ಆದರೆ ಸೃಷ್ಟಿಕರ್ತನಾದ ದೇವರಿಗೂ ಹೆದರುವ ಕಾರಣವಿಲ್ಲವೆಂಬ ಸ್ವಾತಂತ್ರ ಮತ್ತು ಸಮಾನತೆಯ ಸಂದೇಶವನ್ನು ಈ ಕೆಳಗಿನ ವಚನಗಳ ಮೂಲಕ ವಿಶ್ವಗುರು ಬಸವಣ್ಣನವರು ಸಾರಿದ್ದಾರೆ.

**"ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ?**
**ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ?**
**ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೆ?**
**ಮನಶುದ್ಧಳ್ಳಾತಂಗೆ ಮಂತ್ರದ ಹಂಗೇಕೆ?**
**ಭಾವಶುದ್ಧವುಳ್ಳಾತಂಗೆ ಹೂವಿನ ಹಂಗೇಕೆ?**
**ಕೂಡಲಚನ್ನಸಂಗಯ್ಯ! ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ?"**

**"ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ**
**ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ**
**ಕೂಡಲಸಂಗಮದೇವ ನಿಮ್ಮ ಮನೆಯ ಮಗನೆಂದೆಸಯ್ಯಾ."**
**"ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ**
**ಜಲಬಿಂದುವಿನ ವ್ಯವಹಾರ ಒಂದೇ.**
**ಆಸೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೇ.**
**ಏನನೋದಿ, ಏನ ಕೇಳಿ, ಏನು ಫಲ?**
**ಕುಲಜನೆಂಬುವುದಕ್ಕೆ ಆವುದು ದೃಷ್ಟ?**
**ಸಂಪತ್ಥಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ!**
**ಆತ್ಮಜೀವ ಸಮಾಯುಕ್ತಂ ವರ್ಣನಾಂ ಕಿಂ ಪ್ರಯೋಜನಮ್॥**
**ಎಂದುದಾಗಿ, ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ**

ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರು ಉಂಟೆ ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವ ಲಿಂಗಸ್ಥಲವನರಿದವನೇ ಕುಲಜನು”[2]

“ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ, ಜಲವೊಂದೇಃ ಶೌಚಾಚಮನಕ್ಕೆ,
ಕುಲವೊಂದೆ ತನ್ನ ತಾನರಿದವಂಗೆ, ಫಲವೊಂದೇ ಷಡುದರುಶನ ಮುಕ್ತಿಗೆ,
ನಿಲವೊಂದೆ ಕೂಡಲಸಂಗಮದೇವಾ ನಿಮ್ಮನರಿದವಂಗೆ”.[3]

## ಲಿಂಗ ಸಮಾನತೆ:

ಲಿಂಗಭೇದದಿಂದಾದ ಅನ್ಯಾಯವನ್ನು ಸರಿಪಡಿಸಲು ಮಹಿಳಾ ಮಾನವ ಹಕ್ಕು ಆಯೋಗ, ಉದ್ಯೋಗ ಮತ್ತು ಸ್ಥಳೀಯ ರಾಜ್ಯಸಂಸ್ಥೆಯಲ್ಲಿ 33% ಶೇಕಡಾವಾರು ಅನುಷ್ಠಾನದಲ್ಲಿ ತಂದರೂ ನಿರೀಕ್ಷಿಸಿದ ಫಲಿತಾಂಶ ಮಾತ್ರ ಇನ್ನುವರೆಗೂ ಸಿಕ್ಕಿಲ್ಲ. ಮಹಾಯೋಗಿ ಸಿದ್ಧರಾಮಶರಣರು ಮತ್ತು ಜಗಜ್ಯೋತಿ ಬಸವೇಶ್ವರರು ಈ ಕೆಳಗಿನ ತಮ್ಮ ವಚನಗಳಲ್ಲಿ ಮಹಿಳಾ ಘನತೆಯನ್ನು ಕೊಂಡಾಡಿದ್ದಾರೆ.

“ತಾನು ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾನು ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾನು ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು
ತಾನು ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಇದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಸಾಕ್ಷಾತ್ ಕಪಿಲಸಿದ್ದ ಮಲ್ಲಿಕಾರ್ಜುನ”

“ಜನಿತಕ್ಕೆ ತಾಯಗಿ ಹೆತ್ತಳು ಮಾಯೆ,
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ,
ಕೂಟಕ್ಕೆ ಸ್ತ್ರೀಯಾಗಿ ಕೋಡಿದಳು ಮಾಯೆ,
ಇದಾದಾವ ಪರಿಯಲ್ಲಿ ಕಾಡಿಸಿತ್ತು ಮಾಯೆ,
ಈ ಮಾಯೆಯ ಕಳವಡೆ ಎನ್ನವಳವಲ್ಲ
ನೀವೆ ಬಲ್ಲರಿ ಕೂಡಲಸಂಗಮದೇವಾ!”.

## ಏಕೀಶ್ವರವಾದ:

ಭಾರತ ಸಂವಿಧಾನವು ತನ್ನ ನಾಗರಿಕರಿಗೆ ಬೇಕಾದ ಧರ್ಮದೇವರುಗಳ ಆಚರಣೆಯ ಕುರಿತು ಸಂವಿಧಾನ ಭಾಗ ಮೂರರಲ್ಲಿ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸ್ವಾತಂತ್ರವನ್ನು ಕೊಡಲಾಗಿದೆ. ಆದರೆ ಬಸವಾದಿ ಶರಣರು ಮಾತ್ರ ಶಿವನೆಂಬ ಏಕದೇವೋಪಾಸನೆಯನ್ನು ಮಾತ್ರ ಆರಾಧಿಸಲಷ್ಟೆ ಅನುಮತಿಸಿರುವುದು ವಿಶೇಷವಾಗಿದೆ. ಅಂದರೆ ಬಹುದೇವತಾರಾಧನೆಯನ್ನು ನಿರಾಕರಿಸಿದ್ದಾರೆ.

“ನಂಬಿದ ಹೆಂಡತಿಗೆ ಗಂಡನೊಬ್ಬ
ನಂಬಬಲ್ಲ ಭಕ್ತನಿಗೆ ದೇವನೊಬ್ಬ
ಬೇಡ ಬೇಡ ಅನ್ಯ ಪುರುಷರ ಸಂಗ ಬೇಡ
ಬೇಡ ಬೇಡ ಅನ್ನದೈವದ ಸಂಗ ಬೇಡ
ಅನ್ನ ದೇವರ ಆರಾಧನೆಯೆಂಬುದು ಹಾದರ ಕಾಣಿರೋ
ಕೂಡಲ ಸಂಗಮದೇವರು ಕಂಡಡೆ ಕಿವಿ, ಮೂಗ ಕೊಯ್ಯದೆ ಬಿಡನು.”[4]

**ಕಾಯಕ ಮತ್ತು ದಾಸೋಹ:**

ಭಾರತದಲ್ಲಿ ಜಾತಿಗನುಗುಣವಾಗಿ ಎಲ್ಲ ವೃತ್ತಿಗಳು ಹಂಚಿಕೆಯಾಗಿ ಮೇಲುಕೀಳೆಂಬ ಕಲ್ಪನೆಗಳು ಬೆಸೆದುಕೋಡಿದ್ದವು. ಎರಡನೆಯದಾಗಿ ದುಡಿಯುವ ಒಂದು ವರ್ಗವಿದ್ದರೆ ದುಡಿದವರ ಪ್ರತಿಫಲವನ್ನು ದುಡಿಯದೇ ಅನುಭೋಗಿಸುವ ಇನ್ನೊಂದು ವರ್ಗವಿತ್ತು. ಈ ತಾರತಮ್ಯವನ್ನು ತೊಡೆದುಹಾಕಲು ಪ್ರತಿಯೊಬ್ಬ ರಿಗೂ ಕಾಯಕವನ್ನು ಕಡ್ಡಾಯಗೊಳಿಸಿದರು ಮತ್ತು ಯಾವ ವೃತ್ತಿಯೂ ಮೇಲಲ್ಲ ಕೀಳಲ್ಲವೆಂಬ ಸತ್ಯವನ್ನು ಸಾರಿದರು. ಗುರುಲಿಂಗಜಂಗಮರಲ್ಲದೇ ದೇವರೂ ಸಹ ಈ ಕಾಯಕವೆಂಬ ಕಟ್ಟಳೆಯಿಂದ ಹೊರತಲ್ಲವೆಂಬುದು ಬಸವಾದಿಶರಣರ ಚಿಂತನೆಯು ವಿಶೇಷವಾಗಿತ್ತೆಂಬುದು ಈ ಕೆಳಗಿನ ವಚನಗಳನ್ನು ನೋಡಬಹುದಾಗಿದೆ.

“ಕಾಯಕದಲ್ಲಿ ನಿರತನಾದೊಡೆ ಗುರು ದರ್ಶನವಾದರೂ ಮರೆಯಬೇಕು
ಕಾಯಕದಲ್ಲಿ ನಿರತನಾದೊಡೆ ಲಿಂಗಪೂಜೆಯಾದರೂ ಮರೆಯಬೇಕು
ಕಾಯಕದಲ್ಲಿ ನಿರತನಾದೊಡೆ ಜಂಗಮ ಮುಂದಿದ್ದರೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.”[5]

“ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ
ಪ್ರತ್ಯಕ್ಷವಾದ ಪರಮೇಶ್ವರನ ಕಂಡು,.
ಇತ್ಯಲೇಕಯ್ಯಾ ಕಾಯದ ತಿತ್ತಿಯ ಹೊತ್ತಾಡುವನ ಮುಂದೆ?
ನಿನ್ನ ಭಕ್ತರ ಠಾವಿನಲ್ಲಿಗೆ ಹೋಗಿ ಮುಕ್ತಿಯ ಮಾಡು.
ನೀ ಹೊತ್ತ ಬಹುರೂಪದಿ ತಪ್ಪದೆ ರಜತ ಬೆಟ್ಟದ ಮೇಲಕ್ಕೆ ಹೋಗು
ನಿನ್ನ ಭಕ್ತರ ಮುಕ್ತಿಯ ಮಾಡು…”[6]

**ಸಾಮಾಜಿಕ ನ್ಯಾಯ ಮತ್ತು ಜಾತ್ಯಾತೀತತೆ:**

ಬಸವಾದಿಶರಣರ ಚಳುವಳಿಯ ಉಗಮಕ್ಕೆ ಮೂಲ ಪ್ರೇರಣೆಯೆಂದರೆ ಎಲ್ಲ ಜನರಿಗೂ ಎಲ್ಲ ಬಗೆಯ ನ್ಯಾಯದೊರಕಿಸಿಕೊಡುವುದಾಗಿತ್ತೆಂದು ಅ ರ್ಥೈಸಲಾಗುತ್ತದೆ. ವರ್ಣ, ಜಾತಿ, ಅಸ್ಪೃಶ್ಯತೆಯಂತ ಸಮಾಜೊ–ಧಾರ್ಮಿಕ ಅನಿಷ್ಟ ಪದ್ದತಿಗಳಿಂದ ನ್ಯಾಯವಂಚಿತವಾದ ಅಸಂಖ್ಯಾತ ಭಾರತೀಯರಿ ಗೆ ನ್ಯಾಯವನ್ನು ಕೊಡುವುದೇ ವಚನ ಚಳುವಳಿಯ ಮುಖ್ಯ ಆಶಯವಾಗಿ–

ತ್ತು. ವಿಶೇಷವಾಗಿ ಭಾರತದಂತ ಸಂದರ್ಭದಲ್ಲಿ ಧರ್ಮವೇ ಪ್ರತಿಯೊಂದನ್ನು ನಿರ್ಧರಿಸುವ ಮೂಲಮಾನದಂಡವಾಗಿತ್ತು. ಧರ್ಮಶಾಸ್ತ್ರದ ಅಡಿಯಲ್ಲಿ ದಲಿತರ ಮತ್ತು ಮಹಿಳೆಯರ ಶೋಷಣೆಯು ಹೇಳುತೀರದ ಹಂತವನ್ನು ತಲುಪಿತ್ತು. ಇದನ್ನು ಸರಿಪಡಿಸಲೆಂದೇ ಮಹಾವೀರ, ಬುದ್ಧ, ಗುರುನಾನಕ್‌ರಂತ ಧರ್ಮ ಪ್ರವಾದಿಗಳು ಆಗಿಹೋದರು. ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ, ವಿವೇಕಾನಂದ, ಜ್ಯೋತಿಬಾ ಫುಲೆ, ಪೇರಿಯಾರ ನಾರಾಯಣಗುರು, ಠಕ್ಕರ ಬಾಬಾರಂತವರು ಲೆಕ್ಕವಿಲ್ಲದಷ್ಟು ಸಂಘರ್ಷಗಳನ್ನು ಮಾಡಿಹೋಗಿದ್ದರೂ ಸಂವಿಧಾನದಡಿಯಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕಾಗಿ ಸಂವಿಧಾನದಡಿಯಲ್ಲಿ 30 ಕ್ಕಿಂತಲೂ ಹೆಚ್ಚು ವಿಧಿಗಳನ್ನು ನಿರೂಪಿಸಲಾಗಿದೆ. ಸ್ವಂತ ಸಂವಿಧಾನ ಪಿತಾಮಹರಾದ ಡಾ॥ ಅಂಬೇಡ್ಕರ್‌ರಂತವರು ಮತ್ತು ಸಂವಿಧಾನಾತ್ಮ ವಿವಿಧ ಸಮಿತಿಗಳ ಸದಸ್ಯರಾಗಿದ ಡಾ॥ ಜಗಜೀವನ್ ರಾಮ್‌ರಂತವರು ಆಗಿ ಹೋದರೂ ಜಾತಿ ಮತ್ತು ಅಸ್ಪೃಶ್ಯತಾ ಹಾಗೂ ಮಹಿಳಾ ಸಮಸ್ಯೆಗಳು ಇಂದಿಗೂ ಜೀವಂತವಾಗಿಯೆ ಉಳಿದಿವೆ. ಈ ದಿಶೆಯಲ್ಲಿ 12ನೇ ಶತಮಾನದ ಬಸವಾದಿಶರಣರ ಹೋರಾಟವು ಮಾತ್ರ ಅನುಪಮವಾದದ್ದು. ಸಾಮಾಜಿಕ ನ್ಯಾಯಕ್ಕೆ ಭದ್ರಬುನಾಧಿಯಾಗಿರುವ ಇವತ್ತಿನ ಸಂವಿಧಾನದ ವಿಧಗಳಿಗೆ 12ನೇ ಶತಮಾನದ ಬಸವಾದಿ ಶರಣರು ಅಂದೇ ತಳಪಾಯ ಹಾಕಿದ್ದಾರೆಂಬುದಕ್ಕೆ ಈ ಕೆಳಗಿನ ವಚನಗಳೇ ಸಾಕ್ಷಿಯಾಗಿವೆ.

**"ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ? ಕುಲವುಂಟೆ ಜಂಗಮವಿದ್ದಡೆಯಲ್ಲಿ?**
**ಎಂಜಲುಲುಂಟೆ ಪ್ರಸಾದವಿದ್ದಡೆಯಲ್ಲಿ? ಅಪವಿತ್ರದ ನುಡಿಯ ನುಡಿವ ಸೂತಕವೆ ಪಾತಕ,**
**ನಿಷ್ಕಳಂಕ ನಿಜೈಕ್ಯ ತ್ರವಿಧನಿರ್ಣಯ, ಕೂಡಲಸಂಗಮದೇವ ನಿಮ್ಮ ಶರಣರಿಗಲ್ಲದಿಲ್ಲ."[7]**

**"ಜಾತಿವಿಡಿದು ಸೂತಕವನರಿಸುವೆ! ಜ್ಯೋತಿವಿಡಿದು ಕತ್ತಲೆಯನರಿಸುವೆ!**
**ಇದೇಕೊ ಮರಳು ಮಾನವ? ಜಾತಿಯಲ್ಲಿ ಅಧಿಕನೆಂಬೆ;**
**ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನು? 'ಭಕ್ತನೆ ಶಿಖಾಮಣಿ' ಎಂದುದು ವಚನ,**
**ನಮ್ಮ ಕೂಡಲಸಂಗನ ಶರಣರ ಪಾದಪರುಷವ ನಂಬು ಕೆಡಬೇಡ, ಮಾನವ."[8]**

**"ಹೊಲೆಯೊಳಗೆ ಹುಟ್ಟಿ ಕುಲವನರಿಸುವೆ, ಎಲವೊ, ಮಾತಂಗಿಯ ಮಗ ನೀನು;**
**ಸತ್ತುದನೆಳೆವನೆತ್ತಳ ಹೊಲೆಯ? ಹೊತ್ತು ತಂದು ನೀವು ಕೊಲುವಿರಿ**
**ಶಾಸ್ತ್ರವೆಂಬುದು ಹೋತಿಂಗೆ ಮಾರಿ ವೇದವೆಂಬುದು ನಿಮಗೆ ತಿಳಿಯದು**
**ನಮ್ಮ ಕೂಡಲಸಂಗನ ಶರಣರು ಕರ್ಮವಿರಹಿತರು, ಶರಣಸನ್ನಿಹಿತರು, ಅನುಪಮಚಾರಿತ್ರರು**
**ಅವರಿಗೆ ತೋರಲು ಪ್ರತಿಯಿಲ್ಲವೊ!"[9]**

**ಬ್ರಾತೃತ್ವ:**

ಬ್ರಾತೃತ್ವವೆನುವದ್ದನ್ನು ಕಾಯ್ದೆಕಾನೂನಿನಿಂದ ತಂದು ಕೊಡುವ ವಿಷಯವಲ್ಲ.

ಅದು ಸಾಮಾಜಿಕ ಸಹಬಾಳ್ವೆಯಿಂದ ಮತ್ತು ಸಾಮಾಜಿಕ ಅಂತಃಪ್ರಜ್ಞೆಯಿಂದ ಮಾತ್ರ ಒಡಮೂಡುವಂತಾದ್ದು.ಸಮಸ್ಥ ಭಾರತೀಯರೆಲ್ಲರು ವರ್ಣ, ಜಾತಿ, ವರ್ಗ, ಲಿಂಗಗಳಲ್ಲಿ ಹರಿದಂಚಿ ಹೋಗಿದವು ಅಲ್ಲದೆ ಅಲ್ಲಿರುವ 33 ಕೋಟಿ ದೇವರುಗಳೂ ಸಹ ಜಾತಿವಾರು ಹರಿದುಹಂಚಿ ಹೋಗಿವೆ. ಹಾಗಾಗಿ ಅತಿಯಾದ ವಿವಿಧತೆಯ ಕಾರಣಗಳಿಂದಾಗಿ ಭಾರತೀಯರಲ್ಲಿ ಸಂವಿಧಾನದ ಪೂರ್ವಪೀಠಿಕೆಯ ಪ್ರಾರಂಭದಲ್ಲಿ ಹೇಳಿರುವಂತೆ, "ಭಾರತೀಯರಾದ ನಾವು" ಎಂಬುದು ಹೇಳಿಕೆಗಷ್ಟೇ ಸೀಮಿತವಾಗಿದೆ ಹೊರತು ಭಾವನಾತ್ಮಕವಾಗಿ ಬೆರತಿಲ್ಲ. ಈ ಮನೋಭೂಮಿಕೆಯಿಂದ ಹೊರಬರಲು ಭಾರತೀಯರಿಗೆ ವಿಶ್ವಗುರು ಬಸವೇಶ್ವರರು ಈ ಕೆಳಗಿನ ತಮ್ಮ ಒಂದು ವಚನದಲ್ಲಿ ಬ್ರಾತೃತ್ವ ಭಾವನೆಯ ಅರ್ಥವನ್ನು ಅಸಮಾನತೆಯಿಂದ ತೊಳಲಾಡುವ ಭಾರತೀಯರಲ್ಲಿ ಮೂಡಿಸಲು ಪ್ರಯತ್ನಿಸಿದ್ದಾರೆ.

**"ಕಾಗೆಯೊಂದಗಳ ಕಂಡರೆ ಕರೆಯದೆ ತನ್ನ ಬಳಗವನು?**
**ಕೋಳಿಯೊಂದು ಕುಟುಕು ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ?**
**ಶಿವ ಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಳಿಗಿಂತ ಕರಕಷ್ಟ! ಕೂಡಲಸಂಗಮದೇವ"**[10]

**ಸಮಾರೋಪ:**

ಒಂದು ಧರ್ಮ, ಒಂದು ದೇವರು, ಒಂದು ನಡತೆಯನ್ನು ನಿಯಂತ್ರಿಸುವ ಸಂಹಿತೆ, ಮತ್ತು ಒಂದೇ ಧರ್ಮಗ್ರಂಥಗಳೆಂಬುವವು ಮಾತ್ರ ಜನರನ್ನು ಭಾವನಾತ್ಮಕವಾಗಿ ಒಂದಾಗಿ ಹಿಡಿಯಬಲ್ಲವು ಮತ್ತು ಹೃದಯಗಳನ್ನು ಒಂದಾಗಿ ಬೆಸೆಯಬಲ್ಲವು ಹಾಗೂ ಒಂದೆಂಬ ಸಮಾಜಿಕ ಭಾವನೆಯನ್ನು ರೂಪಿಸಬಲ್ಲವೆಂದು ಮನಗಂಡಿದ್ದರು. ಸರ್ವರೂ ಸರ್ವರಿಗಾಗಿ ದುಡಿಯುವುದು, ಸರ್ವರೂ ಸರ್ವರಿಗಾಗಿ ಇಂತ ಮನೋಭಾವನೆಯು ತ್ಯಾಗ ಮಾಡುವುದು, ಸ್ವರ್ಗಕ್ಕೆ ಸಮಾನವಾದ ಸಮಾಜವನ್ನು ಈ ಭೂಮಿಯ ಮೇಲೆ ಸ್ಥಾಪಿಸಲು ಸಾಧ್ಯವಾಗಬಲ್ಲದೆಂಬುದು ಬಸವಾದಿಶರಣರು ಬಲವಾಗಿ ನಂಬಿದ್ದರು. ಜೀವಂತವಾಗಿರುವಾಗಲೇ ಏನೆಲ್ಲವನ್ನು ಅನುಭವಿಸುವ ಲಿಂಗಾಂಗಸಾಮರಸ್ಯದ ಶಿವಯೋಗವನ್ನು ಪರಿಚಯಿಸಿ ನುಡಿದಂತೆ ನಡೆಯುವ ಬದ್ಧತೆಯನ್ನು ಪ್ರಾಯೋಗಿಕತೆಯಲ್ಲಿ ತಂದಿದ್ದರು. ಕಲುಷಿತಗೊಂಡಿರುವ ಭಾರತೀಯರ ಹೃದಯವನ್ನು ಇಂತಹ ವಚನಸಾಹಿತ್ಯದಿಂದ ತೊಳೆಯುವದು ಇಂದು ಎಲ್ಲಿಲ್ಲದ ಅವಶ್ಯವಾಗಿದೆ ಮತ್ತು ನವಭಾರದ ನಿರ್ಮಾಣದ ಕನಸು ನನಸಾಗಲೆಂದು ಆಶೈಸುತ್ತೇನೆ ಹಾಗೆ ಮಹಾನ್ ಐತಿಹಾಸಿಕ ತಜ್ಞರುಗಳಾದ ವಿಲ್ ಡುರಾಂಟ್ ಮತ್ತು ಟಾಯಿನ್‌ಬೀ ಯವರ ಆಸೆಯಂತೆ ವಿಶ್ವರಾಷ್ಟ್ರಗಳಿಗೆ ಭಾರತವು ಗುರುವಿನ ಸ್ಥಾನವನ್ನು ತುಂಬುವಂತಾಗಲೆಂದು ಆಶಿಸುತ್ತೇನೆ ಹಾಗೆ ಭಾರತದ ಘನತೆ–ಗೌರವಗಳು ವಿಶ್ವಮಟ್ಟದಲ್ಲಿ ಹರಡುವಂತಾಗಲೆಂದು ಮತೊಮ್ಮೆ

ಹಾರೈಸುತ್ತೇನೆ.

**ಅಡಿಟಿಪ್ಪಣಿಗಳು:**


1. ರಾಜಶೇಕರ ಎಚ್. ಎಂ. (2006). ಭಾರತ ಸರ್ಕಾರ ಮತ್ತು ರಾಜಕೀಯ. ಕಿರಣ ಪ್ರಕಾಶನ್. ಮೈಸೂರು. ಪು.ಸಂ. 30
2. ಅನ್ನದಾನೇಶ್ವರ ಮಹಾಸ್ವಾಮಿಗಳು. (2006). ಮಾನವ ಹಕ್ಕುಗಳು ಹಾಗೂ ವೀರಶೈವ ಸಂಸ್ಕೃತಿ. ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ಪು.ಸಂ. 62
3. Lohit D. Naikar. (2007). Basava And human Rights. Basava samithi. Bengaluru. P. 251
4. ಅಂಗಡಿ ಲಿಂಗಪ್ಪ ಲಿಂಗಬಸಪ್ಪ. (2002). ಬಸವಾದಿ ಶರಣರ ವಚನದೀಪ್ತಿ. ಚಿತ್ತರಗಿ ಇಲ್ಲಕಲ್ಲ. ಪು.ಸಂ. 18
5. ಅಂಗಡಿ ಲಿಂಗಪ್ಪ ಲಿಂಗಬಸಪ್ಪ. (2002). ಬಸವಾದಿ ಶರಣರ ವಚನದೀಪ್ತಿ. ಚಿತ್ತರಗಿ ಇಲ್ಲಕಲ್ಲ. ಪು.ಸಂ. 93
6. ಶ್ರೀ ಶಿವರುದ್ರ ಮಹಾಸ್ವಾಮಿಗಳು (ಸಂ). (2005). ಬಸವಪಥ: ಸಂಪುಟ–2. ಬಸವಸಮಿತಿ. ಬೆಂಗಳೂರು. ಪು.ಸಂ. 27
7. Lohit D. Naikar. (2007). Basava And human Rights. Basava samithi. Bengaluru. P. 117
8. Lohit D. Naikar. (2007). Basava And human Rights. Basava samithi. Bengaluru. P. 198
9. Lohit D. Naikar. (2007). Basava And human Rights. Basava samithi. Bengaluru. P. 198
10. ಹಿರೇಮಠ ಬಿ. ಆರ್. (ಪ್ರ.ಸಂ). (2003). ಬಸವಣ್ಣನವರ ವಚನಗಳ ಸಮಾಲೋಚನೆ. ಚೆನ್ನವೀರ ಸ್ವಾಮಿಜಿ ಪ್ರತಿಷ್ಠಾನ, ಸಾರಂಗಮಠ. ಸಿಂದಗಿ. ಪು.ಸಂ. 104.

**ಪರಾಮರ್ಶನ ಗ್ರಂಥಗಳು:**

1. ರಾಜಶೇಕರ ಎಚ್. ಎಂ. (2006). ಭಾರತ ಸರ್ಕಾರ ಮತ್ತು ರಾಜಕೀಯ. ಕಿರಣ ಪ್ರಕಾಶನ್. ಮೈಸೂರು.
2. ಜಗದ್ಗುರು ಅನ್ನದಾನೀಶ್ವರ ಮಹಾಶಿವಯೋಗಿ. (2003). ಷಟಸ್ಥಲ: ಒಂದು ಅಧ್ಯಯನ. ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಕೇಂದ್ರ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
3. ಹಿರೇಮಠ ಬಿ. ಆರ್. (ಪ್ರ.ಸಂ). (2003). ಬಸವಣ್ಣನವರ ವಚನಗಳ ಸಮಾಲೋಚನೆ. ಚೆನ್ನವೀರ ಸ್ವಾಮಿಜಿ ಪ್ರತಿಷ್ಠಾನ, ಸಾರಂಗಮಠ. ಸಿಂದಗಿ.
4. Lohit D. Naikar. (2007). Basava And human Rights. Basava samithi. Bengaluru.
5. ಅಂಗಡಿ ಲಿಂಗಪ್ಪ ಲಿಂಗಬಸಪ್ಪ. (2002). ಬಸವಾದಿ ಶರಣರ ವಚನದೀಪ್ತಿ. ಚಿತ್ತರಗಿ ಇಲ್ಲಕಲ್ಲ.
6. ಶ್ರೀ ಶಿವರುದ್ರ ಮಹಾಸ್ವಾಮಿಗಳು (ಸಂ). (2005). ಬಸವಪಥ: ಸಂಪುಟ–2. ಬಸವಸಮಿತಿ. ಬೆಂಗಳೂರು.
7. ಬಾಗಲಕೋಟಿ ವ್ಹಿ. ವ್ಹಿ. (2008). ಬಸವಣ್ಣನವರ ಹಾಗೂ ಅಕ್ಕಮಹಾದೇವಿಯವರ ವಚನಗಳಲ್ಲಿ ವೈಜ್ಞಾನಿಕ ಅಂಶಗಳು. ವಿಶ್ವಚೇತನ ಪ್ರಕಾಶನ. ಗೋಕಾಕ.
8. ಅನ್ನದಾನೇಶ್ವರ ಮಹಾಸ್ವಾಮಿಗಳು. (2006). ಮಾನವ ಹಕ್ಕುಗಳು ಹಾಗೂ ವೀರಶೈವ ಸಂಸ್ಕೃತಿ. ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.